# ಮಹಿಳಾ ವಿಮೋಚನೆ: ವಿವಿಧ ಆಯಾಮಗಳು

ಪ್ರಮಿಳಾ ಬಾರ್ಕೂರು

ಉಪನ್ಯಾಸಕರು, ಕನ್ನಡ ವಿಭಾಗ, ಶ್ರೀ ಶಾರದಾ ಕಾಲೇಜು ಬಸ್ರೂರು, ಕುಂದಾಪುರ.

**Received: 26/10/2024 ; Acepted: 10/11/2024 ; Published: 06/12/2024**

**DOI: https://doi.org/10.5281/zenodo.14289978**

## ABSTRACT:

ಮನುಷ್ಯ ಮನುಷ್ಯನ ನಡುವಿನ ಅಸಮಾನತೆಯ ಪ್ರಶ್ನೆಯಲ್ಲಿ ಲಿಂಗಾಧರಿತ ಅಸಮಾನತೆ ಅತ್ಯಂತ ಸಂಕೀರ್ಣವಾದುದು ಮತ್ತು ಸೂಕ್ಷ್ಮವಾದುದು. ಹೆಣ್ಣಿನ ದಮನವು ಸಾಮಾಜಿಕ ಹಾಗೂ ಕೌಟುಂಬಿಕ ನೆಲೆಯೆರಡರಲ್ಲೂ ನಡೆಯುವುದರಿಂದ ಶೋಷಕ ವರ್ಗವನ್ನು ಪ್ರತ್ಯೇಕವಾಗಿ ಗುರುತಿಸುವುದು ಅಸಾಧ್ಯ. ಹೆಣ್ಣಿನ ದಮನದ ವಿಚಾರ ಬಹಳ ಸೂಕ್ಷ್ಮವಾದದ್ದು, ಹಾಗಾಗಿ ಲಿಂಗ ತಾರತಮ್ಯದ ಎಲ್ಲ ಹೋರಾಟ ಅಥವಾ ಹೆಣ್ಣಿನ ಬಿಡುಗಡೆಯ ಚರ್ಚೆಯನ್ನು ಕುಟುಂಬದ ನೆಲೆಯಿಂದಲೇ ಪ್ರಾರಂಭಿಸಬೇಕಾಗುತ್ತದೆ. ಅಲ್ಲದೇ ಈ ಹೋರಾಟವನ್ನು ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಹೀಗೆ ಬಹು ಆಯಾಮಗಳಲ್ಲಿ ನಡೆಸಬೇಕಾಗುತ್ತದೆ. ಲಿಂಗ ತಾರತಮ್ಯದ ವ್ಯವಸ್ಥೆಯನ್ನು ಭಂಜನಗೊಳಿಸುವ ಪ್ರಕ್ರಿಯೆಯೇ ಮಹಿಳಾ ವಿಮೋಚನೆ. ಇಂತಹ ಆಶಯದಲ್ಲಿ ಕಟ್ಟುವ ಎಲ್ಲಾ ಚಟುವಟಿಕೆಗಳನ್ನು ವಾಸ್ತವವಾಗಿ ಮಹಿಳಾ ವಿಮೋಚನಾ ಚಳುವಳಿಯಾಗಿಯೇ ಗ್ರಹಿಸಬಹುದು. ಮಹಿಳಾ ವಿಮೋಚನಾ ಹೋರಾಟ ಹೊರ ಜಗತ್ತಿನೊಡನೆ ನಡೆಸುವ ಹೋರಾಟವಷ್ಟೇ ಅಲ್ಲ ಹೆಣ್ಣಿನ ಅಂತಸತ್ವದ ಒಳಲೋಕವನ್ನು ಕಟ್ಟುವ ಹೋರಾಟವು ಆಗಬೇಕು. ಮಹಿಳಾ ವಿಮೋಚನಾ ಚಳುವಳಿಯ ಹೋರಾಟಕ್ಕೆ ಗುರಿಯ ಸ್ಪಷ್ಟತೆ ಹಾಗೂ ದಾರಿಯ ಖಚಿತತೆ ಎರಡೂ ಬಹಳ ಮುಖ್ಯವಾದುದು. ಇಲ್ಲದೇ ಹೋದರೆ ನಾವು ಸಮಾಜದಲ್ಲಿ ಇನ್ನಷ್ಟು ಗದ್ದಲ, ಗೊಂದಲವನ್ನಷ್ಟೇ ಸೃಷ್ಟಿಸಿದಂತಾಗುತ್ತದೆ. ಈ ಲೇಖನದಲ್ಲಿ ಇದರ ಸುತ್ತ ಚರ್ಚಿಸಲಾಗಿದೆ.

## KEYWORDS:

ಲಿಂಗ ತಾರತಮ್ಯ, ಮಹಿಳಾ ವಿಮೋಚನೆ, ಇಂಗ್ಲೀಷ್ ಶಿಕ್ಷಣ, ಸುಧಾರಣಾವಾದಿಗಳು, ಮಹಿಳಾ ಸಬಲೀಕರಣ.

ಮನುಷ್ಯ ಮನುಷ್ಯನ ನಡುವಿನ ಅಸಮಾನತೆಯ ಪ್ರಶ್ನೆಯಲ್ಲಿ ಲಿಂಗಾಧರಿತ ಅಸಮಾನತೆ ಅತ್ಯಂತ ಸಂಕೀರ್ಣವಾದುದು ಮತ್ತು ಸೂಕ್ಷ್ಮವಾದುದು. ಹೆಣ್ಣಿನ ದಮನವು ಸಾಮಾಜಿಕ ಹಾಗೂ ಕೌಟುಂಬಿಕ ನೆಲೆಯೆರಡರಲ್ಲೂ ನಡೆಯುವುದರಿಂದ

ಶೋಷಕ ವರ್ಗವನ್ನು ಪ್ರತ್ಯೇಕವಾಗಿ ಗುರುತಿಸುವುದು ಅಸಾಧ್ಯ. ಹೆಣ್ಣಿನ ದಮನದ ವಿಚಾರ ಬಹಳ ಸೂಕ್ಷ್ಮವಾದದ್ದು ಹಾಗಾಗಿ ಲಿಂಗ ತಾರತಮ್ಯದ ಎಲ್ಲ ಹೋರಾಟ ಅಥವಾ ಹೆಣ್ಣಿನ ಬಿಡುಗಡೆಯ ಚರ್ಚೆಯನ್ನು ಕುಟುಂಬದ ನೆಲೆಯಿಂದಲೇ ಪ್ರಾರಂಭಿಸಬೇಕಾಗುತ್ತದೆ. ಅಲ್ಲದೇ ಈ ಹೋರಾಟವನ್ನು ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಹೀಗೆ ಬಹು ಆಯಾಮಗಳಲ್ಲಿ ನಡೆಸಬೇಕಾಗುತ್ತದೆ. ಲಿಂಗ ತಾರತಮ್ಯದ ವ್ಯವಸ್ಥೆಯನ್ನು ಭಂಜನಗೊಳಿಸುವ ಪ್ರಕ್ರಿಯೆಯೇ ಮಹಿಳಾ ವಿಮೋಚನೆ. ಇಂತಹ ಆಶಯದಲ್ಲಿ ಕಟ್ಟುವ ಎಲ್ಲಾ ಚಟುವಟಿಕೆಗಳನ್ನು ವಾಸ್ತವವಾಗಿ ಮಹಿಳಾ ವಿಮೋಚನಾ ಚಳುವಳಿಯಾಗಿಯೇ ಗ್ರಹಿಸಬಹುದು. ಮಹಿಳಾ ವಿಮೋಚನಾ ಹೋರಾಟ ಹೊರ ಜಗತ್ತಿನೊಡನೆ ನಡೆಸುವ ಹೋರಾಟವಷ್ಟೇ ಅಲ್ಲ ಹೆಣ್ಣಿನ ಅಂತಸತ್ವದ ಒಳಲೋಕವನ್ನು ಕಟ್ಟುವ ಹೋರಾಟವು ಆಗಬೇಕು. ಮಹಿಳಾ ವಿಮೋಚನಾ ಚಳುವಳಿಯ ಹೋರಾಟಕ್ಕೆ ಗುರಿಯ ಸ್ಪಷ್ಟತೆ ಹಾಗೂ ದಾರಿಯ ಖಚಿತತೆ ಎರಡೂ ಬಹಳ ಮುಖ್ಯವಾದುದು. ಇಲ್ಲದೇ ಹೋದರೆ ನಾವು ಸಮಾಜದಲ್ಲಿ ಇನ್ನಷ್ಟು ಗದ್ದಲ, ಗೊಂದಲವನ್ನಷ್ಟೇ ಸೃಷ್ಟಿಸಿದಂತಾಗುತ್ತದೆ.

ಈ ಚಳುವಳಿಯ ಮುಖ್ಯ ಉದ್ದೇಶ ಸ್ತ್ರೀ–ಪುರುಷರ ನಡುವಿನ ಲಿಂಗಾಧರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸುವುದು ಮತ್ತು ಸಾಮಾಜಿಕ, ರಾಜಕೀಯ, ಆರ್ಥಿಕ ಮುಂತಾದ ಬದುಕಿನ ನೆಲೆಗಳಲ್ಲಿ ಸ್ತ್ರೀ ಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಯನ್ನು ರೂಪಿಸುವುದು. ಸ್ತ್ರೀ ಪರ ವಾದಗಳು, ಚಳುವಳಿಗಳು ಪಶ್ಚಿಮದಿಂದ ಭಾರತಕ್ಕೆ ಆಮದಾಗಿ ಬಂದಿರುವ ಇತರ ಅನೇಕ ವಿಚಾರಧಾರೆಗಳ ಸಾಲಿಗೆ ಸೇರುತ್ತದೆ. ಪಶ್ಚಿಮದಲ್ಲಿ ದೀರ್ಘವಾದ ಮಹಿಳಾ ಹೋರಾಟದ ಚರಿತ್ರೆಯಿದೆ. ಯುರೋಪ್ ಖಂಡದ ಜರ್ಮನಿ ನೆದರ್ ಲ್ಯಾಂಡ್, ಫ್ರಾನ್ಸ್, ಇಟಲಿ, ಸ್ಕಾಂಡಿನೇವಿಯಾ ಮೊದಲಾದ ಅನೇಕ ದೇಶಗಳಲ್ಲಿ ಹಾಗೂ ಬ್ರಿಟನ್ ಮತ್ತು ಉತ್ತರ ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಆಯಾ ದೇಶದ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿ ಮಹಿಳೆಯ ಸ್ಥಾನಮಾನ ಮತ್ತು ಹಕ್ಕುಗಳಿಗಾಗಿ ಮಹಿಳೆಯೇ ಹೋರಾಟ ಮಾಡುತ್ತಾ ಬಂದಿರುವ ಚರಿತ್ರೆ ಸುಮಾರು ಇನ್ನೂರು ವರ್ಷಗಳಷ್ಟು ದೀರ್ಘದ್ದು. ಇಪ್ಪತ್ತನೆಯ ಶತಮಾನದ ಅರವತ್ತರ ಮತ್ತು ಎಪ್ಪತ್ತರ ದಶಕಗಳಲ್ಲಿ ಆದೇಶಗಳಲ್ಲಿ ತುಂಬಾ ವ್ಯಾಪಕವಾದ ಮಹಿಳಾ ಚಳುವಳಿಗಳು ನಡೆದವು. ಪಶ್ಚಿಮದ ಮಹಿಳೆಯರ ಈ ಸಂಘಟಿತ ಹೋರಾಟದಲ್ಲಿ ನಾನಾ ರೀತಿಯ ಮಹಿಳಾ ಸಮಸ್ಯೆಗಳಿದ್ದವು. ಆದರೆ ಆ ಎಲ್ಲಾ ಹೋರಾಟಗಳಿಗೂ ಮಹಿಳಾ ಬಿಡುಗಡೆಯೇ ಗುರಿಯಾಗಿದ್ದುದರಿಂದ ಪಶ್ಚಿಮದ ಮಹಿಳೆಯರ ೧೯೬೦ ಮತ್ತು ೧೯೭೦ರ ದಶಕಗಳ ಹೋರಾಟಗಳನ್ನು ಒಟ್ಟಾಗಿ "ಮಹಿಳಾ ವಿಮೋಚನಾ ಚಳವಳಿ" ಎಂದು ಗುರುತಿಸಲಾಗುತ್ತದೆ. ಈ ಮಹಿಳಾ ವಿಮೋಚನಾ ಚಳುವಳಿಗಳು ಬಹುಮುಖ

ಕಾಳಜಿಯನ್ನು ಹೊಂದಿತ್ತು. ಅವುಗಳಲ್ಲಿ ಮುಖ್ಯವಾದುದು.

» ಅಶ್ಲೀಲತೆಯ ವಿರುದ್ಧವಾಗಿ ಕುಟುಂಬದ ಒಳಗೂ ಹೊರಗೂ ಮಹಿಳೆಯ ಮೇಲೆ ನಡೆಯುವ ಅತ್ಯಾಚಾರ, ಹಿಂಸೆ, ದೌರ್ಜನ್ಯಗಳ ವಿರುದ್ಧ ಪ್ರತಿಭಟನೆ.

» ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ವೇತನ, ಅಭಿವೃದ್ಧಿ ಮತ್ತು ಸವಲತ್ತುಗಳು ಸಮಾನವಾಗಿ ಸಿಗಬೇಕು.

» ಮದುವೆ ಮತ್ತು ತಾಯ್ತನಗಳಲ್ಲಿ ಸ್ವಾತಂತ್ರ್ಯ ಮತ್ತು ಆಯ್ಕೆಯ ಹಕ್ಕು ಮಹಿಳೆಯರಿಗೆ ಅಗತ್ಯ.

» ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಕೆಲವು ಗುಂಪಿನ ಮಹಿಳೆಯರು ತಮ್ಮ ವರ್ಗ, ಜನಾಂಗೀಯ ಕಾರಣಗಳಿಗಾಗಿ ಶೋಷಣೆಗೊಳಗಾಗುವುದನ್ನು ತಪ್ಪಿಸುವುದು.

ಈ ಎಲ್ಲಾ ಸಮಸ್ಯೆಗಳಿಗೆ ಕೇಂದ್ರವಾಗಿ ಹೋರಾಟದ ಹಾದಿಯನ್ನು ಪಶ್ಚಿಮದ ಮಹಿಳಾ ಚಳುವಳಿಗಳು ತೀವ್ರಗೊಳಿಸಿದವು.

ಭಾರತದಲ್ಲಿ ಮಹಿಳಾ ವಿಮೋಚನಾ ಸಂಘರ್ಷ ೧೯೭೪-೭೫ರಲ್ಲಿ ಪ್ರಾರಂಭವಾಯಿತು. ವರದಕ್ಷಿಣೆ ಸಾವು, ಅತ್ಯಾಚಾರ, ಸತಿ, ಹೆಣ್ಣು ಭ್ರೂಣಹತ್ಯೆ ಹಾಗೂ ಇನ್ನಿತರ ಹಿಂಸೆಗಳ ವಿರುದ್ಧದ ಹೋರಾಟವಾಗಿತ್ತು. ಸಾಮಾಜಿಕ ಸಂರಚನೆ ಮತ್ತು ಹಿಂಸೆಯ ಕಾರಣಗಳ ಬಗೆಗೆ ಸೈದ್ಧಾಂತಿಕ ತಿಳುವಳಿಕೆಯಿಲ್ಲದೆ ನಡೆಯುತ್ತಿರುವ ಹೋರಾಟ ಇದಾಗಿತ್ತು. ಆದರೆ ಇತ್ತೀಚೆಗೆ ಬುದ್ದಿಜೀವಿಗಳು ಮತ್ತು ಹೋರಾಟಗಾರರ ದೃಷ್ಟಿ ವೈಶಾಲ್ಯ ಸಿದ್ಧಾಂತಗಳು ಹೋರಾಟದ ನೆಲೆಯನ್ನು ಇನ್ನು ಗಟ್ಟಿಗೊಳಿಸಿದೆ. ಭಾರತದ ಹೊಸ ಮಹಿಳಾ ವಿಮೋಚನಾ ಚಳುವಳಿಯ ವಿಶೇಷತೆಯೆಂದರೆ ಹೆಚ್ಚೆಚ್ಚು ದುಡಿಯುವ ಮಹಿಳೆಯರು ಪ್ರಸಕ್ತ ಹೊಸ ಸಾಮಾಜಿಕ ಚಳುವಳಿಗಳ ಚೌಕಟ್ಟಿನೊಳಗೆ ತಮ್ಮ ಹಕ್ಕುಗಳ ಬಗ್ಗೆ ಧ್ವನಿಪೂರ್ಣವಾಗಿ ಜಾಗೃತರಾಗಿರುವುದು. ಹೆಚ್ಚುತ್ತಿರುವ ಸಾಮಾಜಿಕ ಹಿಂಸೆ, ಅರ್ಥಿಕ ಧೃವೀಕರಣ, ರಾಜಕೀಯ ಅವನತಿ, ಪರಿಸರ ಸಮತೋಲನ ನಾಶ ಮತ್ತು ಸ್ಥಾಪಿತ ಪಿತೃ ಪ್ರಧಾನ ವ್ಯವಸ್ಥೆಗೆ ಧಕ್ಕೆಯುಂಟು ಮಾಡುವ ಮತೀಯ ಮೂಲಭೂತವಾದದ ಅಲೆಯ ಸಂದರ್ಭದಲ್ಲೇ ತಮ್ಮ ಹೋರಾಟವನ್ನು ನಡೆಸುತ್ತಿರುವುದು ಮುಖ್ಯವಾಗಿದೆ. ಅಲ್ಲದೇ ಮಾರ್ಕ್ಸ್ ವಾದಿಗಳನ್ನೂ, ಲಿಬರಲ್ಲರನ್ನು ಎಚ್ಚರಗೊಳಿಸುವ ದಿಕ್ಕಿನಲ್ಲಿಯೂ ವೈವಿಧ್ಯಮಯ ಪ್ರಶ್ನೆಗಳನ್ನು ಎತ್ತುವ ಪಾಶ್ಚಾತ್ಯ ಸಿದ್ಧಾಂತಗಳಿಂದ ಎರವಲು ಪಡೆಯುವುದರತ್ತ ಹೊಸ ಮಹಿಳಾ ಚಳುವಳಿ ಹೆಜ್ಜೆ ಹಾಕಿದೆ.

ವಸಹಾತುಶಾಹಿ ಅಡಳಿತದಿಂದ ಭಾರತೀಯರಿಗೆ ದೊರೆತ ಇಂಗ್ಲೀಷ್ ಶಿಕ್ಷಣವು ಅರಿವಿನ ವಿಸ್ತಾರವನ್ನು ತೆರೆದಿಟ್ಟಿತ್ತು. ಬದುಕನ್ನು ನೋಡುವ ದೃಷ್ಟಿಕೋನ

ಬದಲಾಯಿತು. ಪ್ರಶ್ನಿಸುವ ಮನೋಭಾವ ಬೆಳೆಯಿತು. ಸಮಾಜದಲ್ಲಿ ಅಳವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಪಿಡುಗುಗಳು, ಅಂಧ ಆಚರಣೆಗಳನ್ನು ತೊಡೆದು ಹಾಕುವುದೇ ನಿಜವಾದ ವಿಮೋಚನೆಯೆಂದು ಇಲ್ಲಿನ ಬುದ್ಧಿ ಜೀವಿಗಳು ಗ್ರಹಿಸಿದರು. ಮಹಿಳೆಯ ಮೇಲಿನ ದೌರ್ಜನ್ಯ, ಶೋಷಣೆಗೆ ಸಿಡಿಲಾಗಿ ನಿಲ್ಲುವ ಪ್ರವೃತ್ತಿ ಬೆಳೆಯಿತು. ಕ್ರಿಶ್ಚಿಯನ್ ಮಿಷನರಿಗಳು, ದೇಶೀಯ ಸುಧಾರಣಾವಾದಿಗಳು ಹಾಗೂ ಬ್ರಿಟಿಷ್ ಕಾನೂನುಗಳು ಈ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ನಡೆಸಿದವು. ರಾಜಾರಾಮ್ ಮೋಹನ್ ರಾಯ್, ಈಶ್ವರ ಚಂದ್ರ ವಿದ್ಯಾ ಸಾಗರ, ಸ್ವಾಮಿ ದಯಾನಂದ ಸರಸ್ವತಿ, ಜ್ಯೋತಿ ಬಾ ಫುಲೆ, ಮೊದಲಾದ ಸಮಾಜ ಸುಧಾರಕರು ಸತೀಪದ್ಧತಿ, ಬಹುಪತ್ನಿತ್ವ, ಬಾಲ್ಯವಿವಾಹ, ದೇವದಾಸಿ ಪದ್ಧತಿ ನಿಷೇಧಕ್ಕಾಗಿ ಹೋರಾಟ ನಡೆಸಿದರು. ವಿಧವಾ ವಿವಾಹ, ಮಹಿಳಾ ಶಿಕ್ಷಣ, ಅರೋಗ್ಯದಂತಹ ಮಹಿಳಾ ಪರ ಕಾರ್ಯಗಳನ್ನು ರೂಪಿಸಿದರು. ಬ್ರಹ್ಮಸಮಾಜ, ಅರ್ಯ ಸಮಾಜಗಳು ಮಹಿಳೆಯರಲ್ಲಿ ಸಾಂಘಿಕ ಮನೋಭಾವವನ್ನು ಬೆಳೆಸಿಕೊಳ್ಳುವಲ್ಲಿ ಪ್ರೇರಣೆಯಾದವು. ಮಹಿಳೆಯರಲ್ಲಿ ಶಿಕ್ಷಣದ ಪ್ರಜ್ಞೆ ಬೆಳೆದಂತೆ ಶಿಕ್ಷಿತರಾದ ಪಂಡಿತ ರಮಾಬಾಯಿ, ಆನಂದಿಬಾಯಿ ಜೋಷಿ, ರುಕ್ಮಾಬಾಯಿ ಮೊದಲಾದವರು ಮಹಿಳಾ ವಿಮೋಚನೆಯ ದಾರಿಯನ್ನು ವಿಸ್ತರಿಸಿಕೊಂಡರು. ಮತದಾನ, ಚುನಾವಣೆ, ಸ್ಪರ್ಧೆಯಂತ ರಾಜಕೀಯ ಪ್ರಶ್ನೆಗಳು ಮುನ್ನೆಲೆಗೆ ಬಂದವು. ಬ್ರಹ್ಮಸಮಾಜ, ಆರ್ಯಸಮಾಜದಂತಹ ಸುಧಾರಣಾ ಚಳುವಳಿಗಳು ಇಸ್ಲಾಮಿಕ್ ಸಮುದಾಯದಲ್ಲೂ ಪ್ರಾರಂಭವಾಯಿತು. ಭೋಪಾಲ್ ನ ಬೇಗಂ, ಅಲಿಘರ್‌ನಲ್ಲಿ ಸೈಯದ್ ಅಹಮ್ಮದ್ ಖಾನ್ ಮತ್ತು ಶೇಖ್ ಅಬ್ದುಲ್ಲಾ ಮುಂತಾದವರು ಮಹಿಳಾ ಶಿಕ್ಷಣವನ್ನು ಸುಧಾರಿಸುವ ಆಂದೋಲನವನ್ನು ಮುನ್ನಡೆಸಿದರು. ಅನ್ನಿಬೆಸೆಂಟ್, ಮಾರ್ಗರೇಟ್, ಕಸಿನ್, ಸರೋಜಿನಿ ನಾಯ್ಡು ಅವರು ಮಹಿಳೆಯರನ್ನು ಸಾಂಘಿಕ ಶಕ್ತಿಯಾಗಿ ರೂಪಿಸುವಲ್ಲಿ ಬಹು ದೊಡ್ಡ ಕೊಡುಗೆಯನ್ನು ನೀಡಿದರು. ಈನಿಟ್ಟಿನಲ್ಲಿ 'ಆಲ್ ಇಂಡಿಯಾ ವಿಮೆನ್ಸ್ ಕಾನ್ಫರೆನ್ಸ್', ವಿಮೆನ್ ಇಂಡಿಯನ್ ಅಸೋಸಿಯೇಶನ್, ಹೋಂ ರೂಲ್ ಲೀಗ್ ಗಳನ್ನು ಗುರುತಿಸಬಹುದು.

ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹಾಗೂ ಅವರ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳಿಗಾಗಿ ಹೋರಾಡಲು ಮಹಿಳೆಯರನ್ನು ಸಾಮಾಜಿಕವಾಗಿ ಸಜ್ಜುಗೊಳಿಸುವಲ್ಲಿ ಗಾಂಧೀಜಿ ಆಸಕ್ತಿ ವಹಿಸಿದರು. "ಮಹಿಳೆಯರು ಸಮಾನ ಮಾನಸಿಕ ಸಾಮರ್ಥ್ಯಗಳನ್ನು ಹೊಂದಿರುವ ಪುರುಷನ ಒಡನಾಡಿ" ಎಂದು ಸಾರಿದರು. ಅಹಿಂಸಾತ್ಮಕ ಹೋರಾಟಕ್ಕೆ ಸೂಕ್ತವಾದ ಶ್ರೇಷ್ಠ ಗುಣಗಳನ್ನು ಹೊಂದಿರುವ ಮಹಿಳೆಯರು ಸತ್ಯಾಗ್ರಹಕ್ಕೆ ಹೆಚ್ಚು ಸೂಕ್ತ ಎಂದರು. ತಮ್ಮ ನಡುವಿನ ನಿಷೇಧ, ನಿರ್ಬಂಧಗಳನ್ನು ಮುರಿದು ಮಹಿಳಾ ಚಳುವಳಿಗೆ ಹೊಸ ನಾಂದಿ ಹಾಡಿದವು. ಮಹಿಳೆಯರು ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡರು. ಮದ್ಯಪಾನ ನಿಷೇಧ, ಖಾದಿ ಪ್ರಚಾರ, ಸ್ವದೇಶಿ

ಚಳುವಳಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಅವರಲ್ಲಿ ಸಮಾನತೆಯ ಬಗ್ಗೆ ಸಂವಾದವನ್ನು ಹುಟ್ಟು ಹಾಕಿದವು. ಆತ್ಮವಿಶ್ವಾಸ ಮತ್ತು ತಮ್ಮ ಸ್ವಂತ ಶಕ್ತಿಯ ಅರಿವು ಮೂಡಿತು. ರಾಷ್ಟ್ರೀಯವಾದಿ ಚಳುವಳಿಯಲ್ಲಿ ಭಾಗವಹಿಸಿದ ಮೊದಲ ಮಹಿಳೆ ಸರೋಜಿನಿ ನಾಯ್ಡು ಮುಂದಿನ ದಿನಗಳಲ್ಲಿ ಕಾಂಗ್ರೆಸ್ಸಿನ ಮೊದಲ ಮಹಿಳಾ ಅಧ್ಯಕ್ಷರಾದರು. ಇವರಂತೆಯೇ ರಾಣಿ ರುಕ್ಮೀಬಾಯಿ ರಾಜವಾಡೆ, ಕಮಲಬಾಯಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ ಮುಂತಾದವರ ಮುಂದಾಳತ್ವದಲ್ಲಿ ಸಮಾನ ಹಕ್ಕಿಗಾಗಿ ಮಹಿಳೆಯರು ಹೋರಾಟ ನಡೆಸಿದರು. ಇದರಿಂದ ಮಹಿಳಾ ಕಾರ್ಮಿಕ ಪ್ರಸೂತಿ ಸೌಲಭ್ಯ ಅಧಿನಿಯಮ ಜಾರಿಯಾಯಿತು. ರಾಷ್ಟ್ರೀಯ ಆಂದೋಲನದಲ್ಲಿ ಮಹಿಳಾ ಭಾಗವಹಿಸುವಿಕೆಯು ಸಂಪ್ರದಾಯದ ಹಲವಾರು ಅಡೆತಡೆಗಳನ್ನು ಮುರಿದು ಹಾಕುವಲ್ಲಿ ಸಹಾಯ ಮಾಡಿತು. ೧೯೩೦ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಕರಾಚಿ ಅಧಿವೇಶನದಲ್ಲಿ ಮಹಿಳಾ ಸಂಘಟನೆಯು ಸಾಮಾಜಿಕ ಅನ್ಯಾಯವನ್ನು ತೆಗೆದು ಹಾಕಲು ದನಿ ಎತ್ತಿತು. ಇದರ ಪರಿಣಾಮವಾಗಿ ಲಿಂಗ ಸಮಾನತೆಯ ಹಕ್ಕುಗಳು, ಸರಕಾರಿ ಉದ್ಯೋಗ, ಅಧಿಕಾರದ ಅಥವಾ ಗೌರವಯುತವಾದ ಯಾವುದೇ ಹುದ್ದೆಗೆ ನೇಮಕ ಮಾಡುವಾಗ ಯಾವುದೇ ವೃತ್ತಿ ನಡೆಸುವ ಹಕ್ಕನ್ನು ವಯಸ್ಕ ಮತದಾನದ ಹಕ್ಕು ಹಾಗೂ ಚುನಾವಣೆಗೆ ಸ್ಪರ್ಧಿಸುವ ಹಕ್ಕುಗಳಿಗಾಗಿ ಒತ್ತಾಯವನ್ನು ಮಂಡಿಸಲಾಯಿತು. ಈ ಎಲ್ಲಾ ಪ್ರಯತ್ನಗಳಿಂದ ಅನೇಕ ಮಹಿಳಾ ಪರಕಾರ್ಯಗಳು ಮತ್ತು ಕಾಯಿದೆಗಳು ರೂಪುಗೊಂಡವು. ಸಾಮಾಜಿಕ ಸುಧಾರಣಾ ಚಳುವಳಿ ಮತ್ತು ರಾಷ್ಟ್ರೀಯತಾವಾದಿ ಚಳುವಳಿಯು ವಿವಿಧ ಶಾಸಕಾಂಗ ಕಾಯಿದೆಗಳನ್ನು ಜಾರಿಗೊಳಿಸಲು ಕಾರಣವಾಯಿತು. ಮತ್ತು ಭಾರತೀಯ ಸಂವಿಧಾನದಲ್ಲಿ ಮಹಿಳಾ ಚಳುವಳಿಯನ್ನು ಬೆಂಬಲಿಸಲು ವಿವಿಧ ನಿಬಂಧನೆಗಳನ್ನು ಅಳವಡಿಸಲು ಬಲವನ್ನು ಪಡೆಯಿತು.

ಸ್ವಾತಂತ್ರ್ಯ ಪೂರ್ವದಲ್ಲಿದ್ದ ಮಹಿಳಾ ಚಳುವಳಿಯು ಸ್ವಾತಂತ್ರ್ಯೋತ್ತರದಲ್ಲಿ ತನ್ನ ತೀವ್ರತೆ ಕಳೆದುಕೊಂಡಿತು. ದೀರ್ಘ ಸಮುದಾಯದ ಹೋರಾಟದ ಬಳಿಕದ ವಿಶ್ರಾಂತಿ, ದೇಶ ವಿಭಜನೆಯ ಆಘಾತ ಇವು ಹೋರಾಟಗಾರರ ಹಿನ್ನಡೆಗೆ ಕಾರಣವಾಯಿತು. ಆಡಳಿತಶಾಹಿಗೆ ಎದುರಾಗಿ ಹಮ್ಮಿಕೊಂಡ ರೈತ, ಕಾರ್ಮಿಕ, ದಲಿತ, ಪರಿಸರ, ಖಾಸಗೀಕರಣದ ಹೋರಾಟಗಳಲ್ಲಿ ಮಹಿಳಾ ವಿಚಾರಗಳು ಇದ್ದ ಕಾರಣ ಮಹಿಳಾ ಸಂಘಟನೆಗಳು ಬೆಂಬಲಿಸಿದವು. ಅಂತರಾಷ್ಟ್ರೀಯ ನೆಲೆಯಲ್ಲಿ ಸಾಧ್ಯವಾದ ಮಹಿಳಾ ಪ್ರಶ್ನೆ ಕುರಿತ ಚರ್ಚೆ ಸಂವಾದಗಳು ಪ್ರತ್ಯೇಕ ಮಹಿಳಾ ಚಳುವಳಿಯನ್ನು ಹುಟ್ಟು ಹಾಕಿತು. ಹೊಸ ಆಶಯದೊಂದಿಗೆ ಮಹಿಳಾ ಚಳುವಳಿ ಮತ್ತೆ ಅವತರಿಸಿತು. ೧೯೭೫ ರ ಅಂತಾರಾಷ್ಟ್ರೀಯ ಮಹಿಳಾ ವರ್ಷ ಆಚರಣೆ, ೧೯೭೫– ೮೫ ರ ಮಹಿಳಾ ದಶಕ ಆಚರಣೆಗಳು ಮಹಿಳಾ ಹೋರಾಟಕ್ಕೆ ಜಾಗತಿಕ ನೆಲೆಯಲ್ಲಿ ನೀತಿ

ನಿಯಮಗಳನ್ನು ರೂಪಿಸಿಕೊಟ್ಟಿತು. ಮಹಿಳಾ ಹೋರಾಟಕ್ಕೆ ಸೈದ್ಧಾಂತಿಕ ಚೌಕಟ್ಟನ್ನು ಒದಗಿಸಿತು. ಈ ತಿಳುವಳಿಕೆ ಅಧಿಕಾರಿಯ ಪ್ರಭುತ್ವಕ್ಕೆ ಮುಖಾಮುಖಿಯಾಗಿ ಪ್ರಶ್ನೆ ಮಾಡಿತು. ಅಧಿಕಾರದ ಹಿನ್ನೆಲೆಯಲ್ಲಿ ಲಿಂಗ ಅಸಮಾನತೆಯನ್ನು ನಿರ್ವಚಿಸುವ ವಿಧಾನದ ಹುಳುಕನ್ನು ಬಯಲಿಗೆಳೆಯಿತು. ಲಿಂಗ ಅಸಮಾನತೆ ಎನ್ನುವುದು ಒಂದು ನಿರ್ಮಿತ ಕಲ್ಪನೆ ಹಾಗೂ ಅದು ಹೇಗೆ ಅಧಿಕಾರದ ಪ್ರಶ್ನೆಯೊಂದಿಗೆ ಅಂತರ್ ಸಂಬಂಧವನ್ನು ಹೊಂದಿದೆ ಎನ್ನುವ ಸತ್ಯವನ್ನು ಕಂಡುಕೊಳ್ಳಲಾಯಿತು.

ಸಾಮಾಜಿಕ ವ್ಯವಸ್ಥೆ ಬದಲಾದ ಸಂದರ್ಭದಲ್ಲಿ ಅನುದಾನಿತ ಹಾಗೂ ಅನುದಾನ ರಹಿತ ಮಹಿಳಾ ಸಂಘಟನೆಗಳು ತಮ್ಮ ಸೈದ್ಧಾಂತಿಕ ತಳಹದಿಯಲ್ಲಿ ಮಹಿಳಾ ವಿಮೋಚನ ಚಳುವಳಿಯನ್ನು ನಡೆಸುತ್ತಿವೆ. ಈ ಚಳುವಳಿಯ ಉದ್ದೇಶಗಳು ಬದಲಾಗಿವೆ. ಮಹಿಳಾ ಅಭಿವೃದ್ಧಿ, ಮಹಿಳಾ ಉದ್ಯೋಗ, ಮಹಿಳಾ ರಾಜಕೀಯ ಮೀಸಲಾತಿ, ಆಸ್ತಿಯ ಹಕ್ಕು, ವರದಕ್ಷಿಣೆ, ವಿಚ್ಛೇದನ, ಸೌಂದರ್ಯ ಸ್ಪರ್ಧೆಯಂತಹ ವಿಷಯಗಳು ಮುನ್ನೆಲೆಗೆ ಬಂದಿವೆ. ಇದಕ್ಕೆ ಪೂರಕವಾಗಿ ಸರಕಾರ ಅನೇಕ ಕಾರ್ಯ ಯೋಜನೆಗಳನ್ನು ಕಾಯ್ದೆಗಳನ್ನು ಜಾರಿಗೊಳಿಸಿ ದುಡಿಯುತ್ತಿದೆ. ವರದಕ್ಷಿಣೆ ನಿಷೇಧ ಕಾಯ್ದೆ, ವಿವಾಹ ವಿಚ್ಛೇದನ ಕಾಯ್ದೆ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿ ಕಾಯ್ದೆಗಳೊಂದಿಗೆ ಮಹಿಳಾ ಸೆಲ್, ಕುಟುಂಬ ನ್ಯಾಯಾಲಯಗಳ ಮೂಲಕ ಮಹಿಳಾ ಪರ ಪರಿಸರವನ್ನು ನಿರ್ಮಾಣ ಮಾಡುತ್ತಿದೆ. ಮಾನವಿಕ ಸಂಶೋಧನ ಕೇಂದ್ರಗಳಲ್ಲಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಮಹಿಳಾ ಅಧ್ಯಯನ ಒಂದು ಶೈಕ್ಷಣಿಕ ಪಠ್ಯವಿಧಾನವಾಗಿ ಸೇರ್ಪಡೆಗೊಂಡಿದೆ. ಎಂಬತ್ತರ ದಶಕದಿಂದ ಅಥವಾ ಇಪ್ಪತ್ತನೆ ಶತಮಾನದ ಕೊನೆಯ ಹಂತದಲ್ಲಿ ಹುಟ್ಟಿದ ಸ್ತ್ರೀವಾದಿ ಚಿಂತನೆ ಮಹಿಳಾ ಚಳುವಳಿಗೆ ಹೊಸ ದಿಕ್ಕು ಮೂಡಿಸಿತು. ಪಶ್ಚಿಮದಲ್ಲಿ ಹುಟ್ಟಿದ ಈ ಸಿದ್ಧಾಂತ ಬಹು ವ್ಯಾಪಕವಾಗಿ ಮತ್ತು ವೈವಿಧ್ಯವಾಗಿ ರೂಪುಗೊಂಡಿತು.

ಮಹಾತ್ಮ ಜ್ಯೋತಿ ಬಾ ಫುಲೆಯವರ ಅಚ್ಚುಮೆಚ್ಚಿನ ಶಿಷ್ಯರಾದ ಡಾ.ಬಿ.ಆರ್. ಅಂಬೇಡ್ಕರ್ ರವರು ಗುರುವಿನ ವಿಚಾರಗಳಿಗೆ ಸಂವಿಧಾನದ ಚೌಕಟ್ಟು ತೊಡಿಸಿ ಮಹಿಳೆಯರು ಹಾಗೂ ಶೋಷಿತರ ಸ್ವಾತಂತ್ರ್ಯವನ್ನು ಸಾಕಾರಗೊಳಿಸಿದರು. ಈ ನೆಲದ ಮಹಿಳೆಯರಿಗೆ ಸ್ವಾತಂತ್ರ್ಯ ತಂದು ಕೊಡುವುದರ ಮೂಲಕ ಹಿಂದೂ ಧರ್ಮಕ್ಕೆ ಅಮೂಲಾಗ್ರ ಬದಲಾವಣೆ ತರಬೇಕೆಂಬುದು ಅಂಬೇಡ್ಕರ್ ಅವರ ಉದ್ದೇಶವಾಗಿತ್ತು. ಭಾರತದ ಸಂವಿಧಾನ ಜನವರಿ ೨೬,೧೯೫೦ ರಂದು ಜಾರಿಗೆ ಬಂದಿತು. ಸಂವಿಧಾನ ಶಿಲ್ಪಿ ಅಂಬೇಡ್ಕರ್ ರವರು ಜಗತ್ತಿನಲ್ಲಿ ಲಭ್ಯವಿರುವ ಸಂವಿಧಾನಗಳ ಅತ್ಯುತ್ತಮ ಲಕ್ಷಣಗಳನ್ನೆಲ್ಲ ಭಾರತೀಯ ಸಂವಿಧಾನದಲ್ಲಿ ಸಮೀಕರಿಸಿ ಮಹಿಳೆಯರು ಮತ್ತು ಶೋಷಿತ ವರ್ಗದವರ ಬಿಡುಗಡೆಗೆ ಭೂಮಿಕೆಯನ್ನು ಸಿದ್ಧಪಡಿಸಿದರು. ಭಾರತೀಯ ಸಂವಿಧಾನ ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಆದ್ಯತೆಯ ಮೇರೆಗೆ

ದಯಪಾಲಿಸಿದೆ. ಸ್ವತಂತ್ರ ಭಾರತದ ಸಂವಿಧಾನ ಶಿಲ್ಪಿಯಾಗಿ ಮತ್ತು ಕಾನೂನು ಮಂತ್ರಿಯಾಗಿ 'ಹಿಂದೂ ಕೋಡ್ ಬಿಲ್'ನ್ನು ಫೆಬ್ರವರಿ ೧೫, ೧೯೫೫ ರಂದು ಸಂಸತ್ತಿನಲ್ಲಿ ಮಂಡಿಸಿದರು. ತದ ನಂತರ ಅಂಬೇಡ್ಕರ್ ಮಹಿಳೆಯರ ಸಬಲೀಕರಣಕ್ಕೆ ಪೂರಕವಾದ ನಾಲ್ಕು ಮಹತ್ವದ ಮಸೂದೆಗಳನ್ನು ಮಂಡಿಸಿದರು. ಅವುಗಳೆಂದರೆ ಕ್ರಿ.ಶ ೧೯೫೫ ರಲ್ಲಿ ಮಂಡಿತವಾದ ಹಿಂದೂ ವಿವಾಹ ಕಾನೂನು, ಕ್ರಿ.ಶ ೧೯೫೬ ರಲ್ಲಿ ಮಂಡಿತವಾದ ಹಿಂದೂ ಉತ್ತರಾಧಿಕಾರದ ಕಾನೂನು, ಹಿಂದೂ ಅಪ್ರಾಪ್ತೆ ಮತ್ತು ಪೋಷಕತ್ವ ಕಾನೂನು ಹಾಗೂ ಹಿಂದೂ ದತ್ತಕ ಮತ್ತು ಜೀವನಾಂಶ ಕಾನೂನು. ಈ ಕಾನೂನುಗಳು ಭಾರತೀಯ ಮಹಿಳೆಯರ ಪಾಲಿನ ಬೆಳ್ಳಿ ಕಿರಣಗಳಾದವು. ಸಂವಿಧಾನವು ನಾಗರಿಕರಿಗೆ ಲಿಂಗ ಭೇದವಿಲ್ಲದ ಮೂಲಭೂತ ಹಕ್ಕುಗಳನ್ನು ರೂಪಿಸಿಕೊಟ್ಟಿದೆ. ಭಾರತೀಯ ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳು ಮಹಿಳೆಯರ ಕಲ್ಯಾಣ ಮತ್ತು ಅಭಿವೃದ್ಧಿಗೆ ಪೂರಕವಾದ ಅರ್ಥಪೂರ್ಣ ಸಲಹೆ ಮತ್ತು ಸೂಚನೆಗಳನ್ನು ಒಳಗೊಂಡಿದೆ. ಸಂವಿಧಾನ ಮೂಲಭೂತ ಹಕ್ಕುಗಳನ್ನು ಸರ್ಕಾರ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರದಿದ್ದಾಗ ಪ್ರಜೆಗಳು ನ್ಯಾಯಾಲಯದ ಮೊರೆ ಹೋಗಿ ಅನುಕೂಲತೆಗಳನ್ನು ಪಡೆಯಬಹುದಾಗಿದೆ.

ಭಾರತೀಯ ಸಂವಿಧಾನ ವಿಧಿಗಳಾದ 11, 14, 15, 16, 21, 24, 39, 42, 46, 47, 51, 73, 325, 326 ಮತ್ತು 243 ಮಹಿಳೆಯರು ಸಶಕ್ತರಾಗುವ ನಿಟ್ಟಿನಲ್ಲಿ ಅವಶ್ಯಕವಾದ ರಕ್ಷಣೆಗಳು ಮತ್ತು ಉತ್ತೇಜನಾತ್ಮಕ ಕ್ರಮಗಳನ್ನು ಒಳಗೊಂಡಿದೆ. ಭಾರತೀಯ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳು ಪಂಚಾಯತ್ ರಾಜ್ ಸಂಸ್ಥೆ ಮತ್ತು ಪೌರಾಡಳಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ 1/3 ಸ್ಥಾನವನ್ನು ಮೀಸಲಿಟ್ಟಿತು. ಭಾರತೀಯ ಸಂವಿದಾನದ ವಿಧಿ 11 ಮಹಿಳೆಯರ ಮೇಲಿನ ಲಿಂಗ ಆಧಾರಿತ ತಾರತಮ್ಯಗಳನ್ನು ನಿವಾರಿಸುತ್ತದೆ. ಈ ವಿಧಿಯು ಪ್ರಕಾರ ರಾಜ್ಯವು ಉದ್ಯೋಗ ನೀಡಿಕೆ ವಿಚಾರದಲ್ಲಿ ಮಹಿಳೆಯರು ಪುರುಷರಿಗೆ ಸಮಾನ ಹಕ್ಕುಬಾಧ್ಯತೆಗಳನ್ನು ಕಲ್ಪಿಸಬೇಕು. ಉದ್ಯೋಗ ನಿರ್ವಹಿಸುವ ಸ್ಥಳಗಳಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಸಮಾನವಾದ ಆರೋಗ್ಯಕರ ಮತ್ತು ಸುರಕ್ಷಿತ ಪರಿಸರವನ್ನು ಒದಗಿಸುವುದು ಸರಕಾರದ ಜವಾಬ್ದಾರಿಯಾಗಿದೆ. 14ನೇ ವಿಧಿಯು ಎಲ್ಲರಿಗೂ ಕಾನೂನಿನ ದೃಷ್ಟಿಯಲ್ಲಿ ಸಮಾನತೆ ಅಥವಾ ಕಾನೂನಿನ ಸಮಾನ ರಕ್ಷಣೆಯನ್ನು ಖಚಿತ ಪಡಿಸುತ್ತದೆ. 15ನೇ ವಿಧಿಯು ಲಿಂಗ, ಕುಲ, ಜಾತಿ, ಮತ, ಹುಟ್ಟಿನ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ ಎಂದು ಸಾರುತ್ತದೆ. 16ನೇ ವಿಧಿಯ ಉದ್ಯೋಗದ ಅವಕಾಶ ಸ್ತ್ರೀ ಪುರುಷರಿಗೆ ಸಮಾನವಾಗಿ ಲಭಿಸಬೇಕು ಮತ್ತು ಸಮಾನ ದುಡಿಮೆಗೆ ಸಮಾನ ವೇತನವನ್ನು ನೀಡಬೇಕೆಂದು ತಿಳಿಸುತ್ತದೆ, ಮಹಿಳೆಯರಿಗೆ ನೀಡಲಾದ ಮೂಲಭೂತ ಹಕ್ಕುಗಳ ಪೈಕಿ ಸಮಾನತೆಯ ಹಕ್ಕು ಅತ್ಯಂತ ಪ್ರಮುಖವಾದ

ಹಕ್ಕಾಗಿರುತ್ತದೆ. ಯಾವುದೇ ಉದ್ಯೋಗದ ಅವಕಾಶದಲ್ಲಿ ಮಹಿಳೆ ಎಂಬ ಕಾರಣದಿಂದ ಲಿಂಗಭೇದ ಮಾಡಲಾಗದು ಅಥವಾ ಮಹಿಳೆಯ ವಿರುದ್ಧ ಕಾನೂನು ಬಾಹಿರವಾದ ನಿಯಮಗಳನ್ನು ರೂಪಿಸಲಾಗದು. ಭಾರತೀಯ ಸಂವಿಧಾನದ 21ನೇ ವಿಧಿ ಪ್ರತಿಯೊಬ್ಬ ಪ್ರಜೆಗೂ ಬದುಕುವ ಹಕ್ಕು ಅಥವಾ ವೈಯಕ್ತಿಕ ಸ್ವಾತಂತ್ರ್ಯದಿಂದ ಬೇರ್ಪಡಿಸಲಾಗದ ಮಾನವ ಅಧಿಕಾರವನ್ನು ನೀಡುತ್ತದೆ. 24ನೇ ವಿಧಿಯು ಮಹಿಳೆಯರು ದುಡಿವ ಸ್ಥಳದಲ್ಲಿ ಲೈಂಗಿಕ ಕಿರುಕುಳ ಮತ್ತಿತರ ಹಿಂಸಾತ್ಮಕ ಪ್ರವೃತ್ತಿಗಳಿಗೆ ಒಳಪಡಿಸುವುದನ್ನು ತಪ್ಪಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ.

ಭಾರತೀಯ ಸಂವಿಧಾನದ 39(ಅ) ವಿಧಿ ಮಹಿಳೆಯರು ಸಮಾನವಾಗಿ ಜೀವನ ನಿರ್ವಹಿಸುವುದಕ್ಕೆ ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ದೊರಕಿಸಿ ಕೊಡುವುದಕ್ಕೆ ಮತ್ತು ಮಹಿಳೆಯರ ಆರೋಗ್ಯ ಮತ್ತು ಬಲವನ್ನು ವಯಸ್ಸಿಗೆ ಅಥವಾ ಬಲಕ್ಕೆ ತಕ್ಕುದಲ್ಲದ ಉಪವೃತ್ತಿಗಳಲ್ಲಿ ತೊಡಗಿಸಿಕೊಳ್ಳದಂತೆ ಸರ್ಕಾರ ಸೂಕ್ತ ನೀತಿ ಮತ್ತು ಕಾರ್ಯತಂತ್ರಗಳನ್ನು ರೂಪಿಸಲು ಅವಕಾಶ ಮಾಡಿಕೊಡುತ್ತದೆ. 42ನೇ ವಿಧಿಯು ಮಹಿಳೆಯರು ಕೆಲಸ ಮಾಡಲು ನ್ಯಾಯ ಸಮ್ಮತ ಮತ್ತು ದಯಾಪರ ಸ್ಥಿತಿಗಳಿರುವಂತೆ ಮತ್ತು ಪ್ರಸೂತಿ ಪರಿಹಾರ ದೊರೆಯುವಂತೆ ಸರಕಾರ ಕಲ್ಪಿಸಬೇಕು. 39, 41, 42 ಹಾಗೂ 43ನೇ ವಿಧಿಗಳಲ್ಲಿನ ನಿರ್ದೇಶನಗಳ ಅನುಸಾರ ಸರ್ಕಾರ ಸ್ತ್ರೀ ಪುರುಷ ಉದ್ಯೋಗಿಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಉದ್ಯೋಗದಲ್ಲಿ ಬಡ್ತಿ ಅವಕಾಶ, ಮಕ್ಕಳಿಗೆ ಶಿಕ್ಷಣ ಸೌಲಭ್ಯ, ಕ್ಷೇಮ ನಿಧಿ, ಪರಿಹಾರ, ಸಹಾಯಧನ, ಪಿಂಚಣಿ ಸೌಲಭ್ಯ ಇತ್ಯಾದಿಗಳನ್ನು ಕಲ್ಪಿಸಿ ಕೊಡುತ್ತದೆ. ಎಲ್ಲಾ ಕಾರ್ಮಿಕರ ಕಾನೂನುಗಳು ಮಹಿಳೆಯರಿಗೆ ಪುರುಷರಷ್ಟೇ ಸಮಾನ ಅವಕಾಶ ವೇತನ ಮತ್ತು ರಕ್ಷಣೆಗಳನ್ನು ಒದಗಿಸುತ್ತದೆ. 46ನೇ ವಿಧಿಯು ರಾಜ್ಯದ ದುರ್ಬಲ ವರ್ಗಗಳ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನತೆಯ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಸರ್ಕಾರ ವಿಶೇಷ ಜಾಗರೂಕತೆಯಿಂದ ವೃದ್ಧಿ ಗೊಳಿಸತಕ್ಕದ್ದು. ಮತ್ತು ಅವರನ್ನು ಸಾಮಾಜಿಕ ಅನ್ಯಾಯ ಮತ್ತು ಶೋಷಣೆಗಳಿಂದ ಸಂರಕ್ಷಿಸಬೇಕೆಂದು ಸ್ಪಷ್ಟವಾಗಿ ತಿಳಿಸುತ್ತದೆ. ಭಾರತೀಯ ಸಂವಿಧಾನದ 47ನೇ ವಿಧಿ ಮಹಿಳೆಯರನ್ನು ಒಳಗೊಂಡಂತೆ ಸಮಸ್ತ ಭಾರತೀಯರು ಆರೋಗ್ಯ ಪೌಷ್ಟಿಕತೆ ಮತ್ತು ಜೀವನ ಮಟ್ಟವನ್ನು ಹೆಚ್ಚಿಸುವುದು ಸರ್ಕಾರದ ಜವಾಬ್ದಾರಿ ಎಂದು ಸ್ಪಷ್ಟವಾಗಿ ತಿಳಿಸುತ್ತದೆ. ಭಾರತೀಯ ಸಂವಿಧಾನದ 47ನೇ ವಿಧಿ ಮಹಿಳೆಯರನ್ನು ಒಳಗೊಂಡಂತೆ ಸಮಸ್ತ ಭಾರತೀಯರ ಆರೋಗ್ಯ, ಪೌಷ್ಟಿಕತೆ ಮತ್ತು ಜೀವನ ಮಟ್ಟವನ್ನು ಹೆಚ್ಚಿಸುವುದು ಸರ್ಕಾರದ ಜವಾಬ್ದಾರಿ ಎಂದು ಸ್ಪಷ್ಟವಾಗಿ ತಿಳಿಸುತ್ತದೆ. ಸಂವಿಧಾನದ 51 (ಅ) ವಿಧಿ ಭಾರತೀಯ ಪ್ರಜೆಗಳು ಧರ್ಮ, ಭಾಷೆ,

ಪ್ರದೇಶ ಅಥವಾ ಲಿಂಗಬೇದಗಳಿಲ್ಲದೆ ಸಾಮರಸ್ಯ ಮತ್ತು ಭ್ರಾತತ್ವಗಳನ್ನು ಕಾಪಾಡಿಕೊಂಡು ಹೋಗಬೇಕೆಂದು ನಿರ್ದೇಶಿಸಿದೆ. ಮಹಿಳೆಯರ ಘನತೆ ಮತ್ತು ಗೌರವಗಳಿಗೆ ಚ್ಯುತಿಯನ್ನುಂಟು ಮಾಡುವ ಯಾವುದೇ ಕಾರ್ಯ ಚಟುವಟಿಕೆಗಳನ್ನು ಭಾರತೀಯ ಪ್ರಜೆಗಳು ತೊಡಗಬಾರದೆಂದು ಸಂವಿಧಾನ ಸ್ಪಷ್ಟವಾಗಿ ತಿಳಿಸಿದೆ.

ಭಾರತೀಯ ಸಂವಿಧಾನದ 73 ನೇ ತಿದ್ದುಪಡಿ ಕಾಯ್ದೆ 1992 ಪ್ರತಿ ಗ್ರಾಮ ಪಂಚಾಯಿತಿಗಳಲ್ಲೂ ಪರಿಶಿಷ್ಟ ಜಾತಿ ಅಥವಾ ವರ್ಗಗಳಿಗೆ ಮೀಸಲಾತಿ ಸೌಲಭ್ಯ ಹಾಗೂ ಮಹಿಳೆಯರಿಗೆ ಅರ್ಧದಷ್ಟು ಸ್ಥಾನಗಳನ್ನು ಮೀಸಲಿಡಲು ನಿರ್ದೇಶನ ನೀಡಿದೆ. ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆ 1992 ಪೌರಾಡಳಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಅರ್ಧದಷ್ಟು ಸ್ಥಾನಗಳನ್ನು ಮೀಸಲಿಡುವ ನಿರ್ದೇಶನ ನೀಡಿದೆ. ಅಲ್ಲದೆ ಸದರಿ ಸಂಸ್ಥೆಗಳಲ್ಲಿ ಪದಾಧಿಕಾರಿಗಳ ಸ್ಥಾನವನ್ನು ಸರದಿಯ ಮೇರೆಗೆ ಮಹಿಳೆಯರಿಗೆ ನೀಡಬೇಕೆಂದು ತಿಳಿಸುತ್ತದೆ. ಸಂವಿಧಾನದ 325ನೇ ವಿಧಿ ಮಹಿಳೆಯರನ್ನು ಒಳಗೊಂಡಂತೆ ಸಮಸ್ತ ಭಾರತೀಯರಿಗೆ ಧರ್ಮ, ಜಾತಿ, ಲಿಂಗದ ಆಧಾರದ ಮೇಲೆ ಮತದಾರರ ಪಟ್ಟಿಯಲ್ಲಿ ಸೇರುವ ಅರ್ಹತೆಯನ್ನು ಒದಗಿಸುತ್ತದೆ. ಮಹಿಳಾ ಸಶಕ್ತೀಕರಣಕ್ಕಾಗಿ ರಚಿಸಲ್ಪಟ್ಟ ಅನೇಕ ಕಾನೂನುಗಳಿವೆ. ಅವುಗಳು ರಾಜ್ಯ ಸರ್ಕಾರದ ಜೀವ ವಿಮಾ ನಿಯಮ (1948) , ಪ್ಲಾಂಟೇಶನ್ ಕಾರ್ಮಿಕರ ಕಾಯ್ದೆ (1951), ಕೌಟುಂಬಿಕ ನ್ಯಾಯಾಲಯಗಳ ಕಾಯ್ದೆ (1951), ವಿಶೇಷ ವಿವಾಹ ಕಾಯ್ದೆ (1954) ಹಿಂದೂ ವಿಧವಾ ಕಾಯ್ದೆ(1956) ಹಿಂದೂ ಪುತ್ರಿ ಪುತ್ರರ ಕಾಯ್ದೆ (1956) ವೇಶ್ಯಾವಾಟಿಕೆ ನಿಯಂತ್ರಣ ಕಾಯ್ದೆ(1956) ಹೆರಿಗೆ ಸೌಲಭ್ಯದ ಕಾಯ್ದೆ(1961) ವರದಕ್ಷಿಣೆ ನಿಷೇಧ ಕಾಯ್ದೆ(1961) ಗರ್ಭಪಾತ ನಿಷೇಧ ಕಾಯ್ದೆ(1971), ಸಮಾನ ವೇತನ ಕಾಯ್ದೆ(1976) ಬಾಲ್ಯವಿವಾಹ ನಿಷೇಧ ಕಾಯ್ದೆ(1979), ಮಹಿಳೆಯರನ್ನು ಅಶ್ಲೀಲ ದುಡಿಮೆ ನಿಷೇಧ ಕಾಯ್ದೆ(1986) ಸತೀಪದ್ದತಿ ನಿಷೇಧ ಕಾಯ್ದೆ(1987) ಭ್ರೂಣ ಹತ್ಯೆ ನಿಷೇಧ ಕಾಯ್ದೆ ಇತ್ಯಾದಿ. ಇಂತಹ ಹಲವಾರು ಕಾನೂನುಗಳು ಮಹಿಳೆಯರ ಹಿತವನ್ನು ರಕ್ಷಿಸುವ ಮತ್ತು ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ಸಹಭಾಗಿತ್ವವನ್ನು ಕಲ್ಪಿಸುತ್ತಿದೆ.

ಸ್ತ್ರೀವಾದಿ ಚಳುವಳಿ ಮತ್ತು ರಾಷ್ಟ್ರೀಯ ಚಳುವಳಿಗಳು ಒಂದಕ್ಕೊಂದು ಪೂರಕವಾಗಿವೆ. ಭಾರತದಲ್ಲಿ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಮಹಿಳೆಯರ ಸುಧಾರಣೆಗೆ ಅನೇಕ ಸಬಲೀಕರಣ ನೀತಿ ಮತ್ತು ಕಾನೂನುಗಳನ್ನು ರೂಪಿಸಲಾಗಿದೆ. ಮಹಿಳಾ ವಿಮೋಚನಾ ಚಳಿವಳಿಗಳು, ಸಂಘಟನೆಗಳು ನಡೆಸಿದ ಹೋರಾಟದ ಫಲವಾಗಿ ಮಹಿಳೆಯರಲ್ಲಿ ಜಾಗೃತಿ ಮೂಡಿದೆ. ಆದರೆ ರಾಜಕೀಯ ಪಕ್ಷಗಳ ಇಚ್ಛಾಶಕ್ತಿಯ ಕೊರತೆ ಹಾಗೂ ಅಧಿಕಾರಶಾಹಿಯ ನಿರ್ಲಕ್ಷ್ಯದಿಂದಾಗಿ ಮಹಿಳೆಯರ ಸಬಲೀಕರಣಕ್ಕೆ ಪೂರಕವಾದ ಸಂವಿಧಾನಾತ್ಮಕ ಅವಕಾಶಗಳು ಪೂರ್ಣ ಪ್ರಮಾಣದಲ್ಲಿ

ಆಚರಣೆಗೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಭಾರತೀಯ ಮಹಿಳೆಯರು ತಮ್ಮ ಅಸ್ತಿತ್ವಕ್ಕಾಗಿ ಮತ್ತು ಸಬಲೀಕರಣಕ್ಕಾಗಿ ಹೋರಾಟವನ್ನು ಮುಂದುವರಿಸುವುದು ಅನಿವಾರ್ಯವಾಗಿದೆ. ಇಷ್ಟಲ್ಲದೆ ಮುಖ್ಯವಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸ ಹಾಗೂ ಅಂತಸತ್ವದ ಪ್ರಜ್ಞೆ ಬೆಳೆಸಬೇಕು. ಮಹಿಳಾ ಪರ ಸವಲತ್ತು, ಕಾನೂನುಗಳ ತಿಳುವಳಿಕೆ ಸಾಮಾನ್ಯ ಮಹಿಳೆಗೂ ತಲುಪುವಲ್ಲಿ ಸಂಘಟನೆಗಳು ದುಡಿಯಬೇಕು. ಪ್ರತಿ ಮಹಿಳೆಯೂ ಹೊಸ ಎಚ್ಚರದಲ್ಲಿ ಎದ್ದು ನಿಲ್ಲುವಂತಾದರೆ ಅದುವೇ ಮಹಿಳಾ ವಿಮೋಚನೆ.

**ಪರಾಮರ್ಶನ ಗ್ರಂಥಗಳು:**

1. ಗಾಯತ್ರಿ ನಾವಡ. (೨೦೦೩). ಮಹಿಳಾ ಸಂಕಥನ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
2. ಮಹೇಶ್ ಚಂದ್ರ ಗುರು ಬಿ. ಪಿ. (೨೦೧೨). ಸಾಹಿತ್ಯ, ಮಹಿಳೆ ಮತ್ತು ಸಬಲೀಕರಣ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
3. ಕಿಶೋರಿ ನಾಯಕ್ ಕೆ. (೧೯೯೯). ಸ್ತ್ರೀ ವಾದದ ನೆಲೆಗಳು ಮತ್ತು ನಿಲುವುಗಳು. ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ. ಮಂಗಳೂರು.
4. ಸುಮಿತ್ರಾಬಾಯಿ ಬಿ. ಎನ್. (೧೯೯೯). ಸ್ತ್ರೀವಾದ. ಕರ್ನಾಟಕ ಸಾಹಿತ್ಯ ಅಕಾಡಮಿ. ಬೆಂಗಳೂರು.
5. ಮೂರ್ತಿಶ್ವರಯ್ಯ ಬೆ. ಕಾ. (೨೦೧೩). ಮಹಿಳೆ ಸಮಾಜ ಮತ್ತು ಕಾನೂನು. ಕರ್ನಾಟಕ ಬುಕ್ ಏಜನ್ಸಿ. ಬೆಂಗಳೂರು.
6. ಪೀರಪ್ಪ ಬಿ. ಸಜ್ಜನ. (೨೦೧೯). ಮಹಿಳಾ ಬೆಳಕು ಡಾ. ಬಾಬಾ ಸಾಹೇಬ್ ಅಂಬೇಡ್ಕರ್. ಶರಣ ಉರಿಲಿಂಗ ಪೆದ್ದಿಮಠ. ಬೀದರ್.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.